# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1012(1025) |
| ಸದಸ್ಯರ ಹೆಸರು | : | ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.03.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಾಲಾ ಶಿಕ್ಷಣ ಇಲಾಖೆಯಲ್ಲಿ ಬೋಧಕೇತರ ವೃಂದದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಖಾಯಂಪೂರ್ವ ಸೇವಾವಧಿ ಘೋಷಣೆ/ಸ್ವಯಂಚಾಲಿತ ವೇತನ ಬಡ್ತಿ/ ಬಡ್ತಿ ಇತರೆ ಸಮಯದಲ್ಲಿ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳನ್ನು ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳು ಆದೇಶಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶಾಲಾ ಶಿಕ್ಷಣ ಇಲಾಖೆಯಲ್ಲಿ ಬೋಧಕೇತರ ವೃಂದದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಖಾಯಂ ಪೂರ್ವ ಸೇವಾವಧಿ ಘೋಷಣೆ/ಸ್ವಯಂಚಾಲಿತ ವೇತನ ಬಡ್ತಿ/ ಬಡ್ತಿ ಇತರೆ ಸಮಯದಲ್ಲಿ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳನ್ನು ಈ ಕೆಳಕಂಡ ನಿಯಮ / ಆದೇಶಗಳನ್ವಯ ಪಡೆದು ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.<br><br>1. ಕರ್ನಾಟಕ ಸರ್ಕಾರಿ(ಕಾಲಬದ್ಧ ಮುಂಬಡ್ತಿ) ನಿಯಮಗಳು 1983ರ ನಿಯಮ 3(ಆ)ರಲ್ಲಿ ಸರ್ಕಾರಿ ನೌಕರರ ಸೇವಾ ದಾಖಲೆ ತೃಪ್ತಿಕರವಾಗಿದ್ದಲ್ಲಿ ಅವರಿಗೆ ಅನ್ವಯಿಸುವ ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ಬಡ್ತಿಗೆ ಅರ್ಹರಿರತಕ್ಕದ್ದು ಎಂದು ನಿರ್ದಿಷ್ಟಪಡಿಸಲಾಗಿರುತ್ತದೆ.<br><br>2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 5 ಎಸ್.ಆರ್.ಪಿ 84, ದಿನಾಂಕ:08.10.1985 ಕ್ರಮ ಸಂಖ್ಯೆ: 5(3) ರ ಅನುಸಾರ ಬಡ್ತಿಗೆ ಪರಿಗಣಿಸುವ ದಿನಾಂಕದ ಹಿಂದಿನ 05 ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಿಶೀಲಿಸಿ ಬಡ್ತಿಗೆ ಅರ್ಹತೆ, ಸೂಕ್ತತೆಯನ್ನು ನಿರ್ಧರಿಸಬೇಕಾಗುತ್ತದೆ(Confidential Reports for a period of five years immediately preceding the date of consideration of his suitability for promotion should be examined). |
| ಆ) | ಹಾಗಿದ್ದಲ್ಲಿ, ವ್ಯವಸ್ಥಿತವಾಗಿ ಹಾಗೂ ಸಮರ್ಪಕವಾಗಿ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ನಿರ್ವಹಿಸದಿರುವುದರಿಂದ | ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣಾ ವರದಿಗಳು)(ತಿದ್ದುಪಡಿ) ನಿಯಮಗಳು, 2002ರ ನಿಯಮ 7ಎ ರನ್ವಯ ಸರ್ಕಾರಿ ನೌಕರರ ಕಾರ್ಯನಿರ್ವಹಣಾ ವರದಿಗಳು ಲಭ್ಯವಿರದ ನಿರ್ದಿಷ್ಟ ಅವಧಿಗೆ ಸಕ್ಷಮ ನೇಮಕಾತಿ |

| | | |
|---|---|---|
| | ಸಮಯೋಚಿತವಾಗಿ ಸಲ್ಲಿಸಲು ಕಷ್ಟಸಾಧ್ಯವಾಗುತ್ತಿರುವ ಕಾರಣ ಶಿಕ್ಷಕ ವೃಂದದವರಿಗೆ ಪರಿಗಣಿಸುವಂತೆಯೇ ಸಂಬಂಧಪಟ್ಟ ಅಧಿಕಾರಿಗಳ ವಿಶೇಷ ವರದಿ ದೃಢೀಕರಣವನ್ನು ಪರಿಗಣಿಸುವ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು) | ಪ್ರಾಧಿಕಾರವು ಇಚ್ಛಿಸಿದ್ದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸುವ ಮೂಲಕ ಸಂಬಂಧಪಟ್ಟ ನೌಕರ, ವರದಿ ಪ್ರಾಧಿಕಾರ, ಪುನರಾವಲೋಕನ ಪ್ರಾಧಿಕಾರ ಮತ್ತು ಅಂಗೀಕಾರ ಪ್ರಾಧಿಕಾರಗಳಿಗೆ ವಿಶೇಷ ವರದಿ ಸಿದ್ಧಪಡಿಸಿ ಸಲ್ಲಿಸುವಂತೆ ನಿರ್ದೇಶಿಸಲು ಅವಕಾಶವಿದೆ. ಈ ನಿಯಮದಲ್ಲಿನ ಅವಕಾಶದಂತೆ ಸಂದರ್ಭಾನುಸಾರ ಕ್ರಮವಹಿಸಲಾಗುತ್ತಿದೆ. |
| ಇ) | ವಿಶೇಷ ವರದಿ ಪರಿಗಣಿಸುವುದಾದಲ್ಲಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆಯೇ; ಹಾಗಿದ್ದರೆ, ಯಾವ ರೀತಿ ನಿರ್ದೇಶನ ನೀಡಲಾಗಿದೆ; (ಮಾಹಿತಿ ನೀಡುವುದು) | |
| ಈ) | ವಿಶೇಷ ವರದಿ ಪರಿಗಣಿಸದಿರಲು ಕಾರಣಗಳೇನು; ಒಂದೇ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಅಧಿಕಾರಿ/ನೌಕರರುಗಳಿಗೆ ತಾರತಮ್ಯ ಮಾಡಿದಂತಾಗುವುದಿಲ್ಲವೇ; (ಈ ಕುರಿತು ಸ್ಪಷ್ಟ ಅಭಿಪ್ರಾಯ ನೀಡುವುದು) | |
| ಉ) | ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಆಯಾ ವರ್ಷದಲ್ಲಿ ಬರೆಯುವ ಮತ್ತು ನಿರ್ವಹಿಸುವ ಕುರಿತು ಸರ್ಕಾರದ ಆದೇಶಗಳಿದ್ದಾಗ್ಯೂ ಸಹ ಸಮಯೋಚಿತವಾಗಿ ನಿರ್ವಹಣೆ ಮಾಡುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ವ್ಯವಸ್ಥಿತವಾಗಿ ನಿರ್ವಹಣೆ ಮಾಡದಿರಲು ಕಾರಣಗಳೇನು; ಅಂತಹ ಅಧಿಕಾರಿ/ನೌಕರರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು) | ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಆಯಾ ವರ್ಷದಲ್ಲಿ ಬರೆಯುವುದು ಮತ್ತು ನಿರ್ವಹಿಸುವುದು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.<br><br>ಸಕಾಲದಲ್ಲಿ ಅಗತ್ಯ ಕ್ರಮವಹಿಸುವಂತೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಗೆ ಸೂಚಿಸಲಾಗಿದೆ. |

**ಸಂಖ್ಯೆ:**ಇಪಿ 120 ಎಸ್ ಟಿಬಿ 2025

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.